ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿರಸ್ತೆ, ಬೆಂಗಳೂರು-

ಸಂಖ್ಯೆ:ಡಿಹೆಚ್‌ಎಸ್/ರಿಟ್/ 04 /2023-24

ದಿನಾಂಕ:05/01/2024

## ಕಾನೂನು ಸಲಹೆಗಾರರು ಹಾಗೂ ಸಮಾಲೋಚಕರ ನೇಮಕಾತಿ ವೆಬ್‌ಸೈಟ್

| ಕ್ರ.ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆ ಮತ್ತು ಅನುಭವ | ಹುದ್ದೆ ಹಾಗೂ ಮಾಸಿಕ ವೇತನ |
|---|---|---|---|
| 1 | ಕಾನೂನು ಸಲಹೆಗಾರರು (Legal Advisor | ಕೆ.ಎ.ಟಿ / ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿ ಕನಿಷ್ಠ 15 ರಿಂದ 20 ವರ್ಷಗಳ ಅನುಭವ ಹೊಂದಿರಬೇಕು. (ವೃತ್ತಿಪರ ಸೇವಾ ನಿಯಮಗಳು ಹಾಗೂ ಕೆ.ಸಿ.ಎಸ್.ಆರ್ / ಸಿಸಿಎ ನಿಯಮ 1957 ನಿಯಮಗಳ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು) | (ಒಂದು) [01]<br>ರೂ 80,000/- |
| 2 | ಕಾನೂನು ಸಮಾಲೋಚಕರು (Legal consultant) | ಕೆ.ಎ.ಟಿ / ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿ ಕನಿಷ್ಠ 3 ರಿಂದ 10 ವರ್ಷಗಳ ಅನುಭವ ಹೊಂದಿರಬೇಕು. (ವೃತ್ತಿಪರ ಸೇವಾ ನಿಯಮಗಳು ಹಾಗೂ ಕೆ.ಸಿ.ಎಸ್.ಆರ್ / ಸಿಸಿಎ ನಿಯಮ 1957 ನಿಯಮಗಳ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. | (ಎರಡು)[02]<br>ರೂ 45,000/- |

### ಅರ್ಹತಾ ಷರತ್ತುಗಳು

1. ಹೊರಗುತ್ತಿಗೆ ಮೇಲಿನ ಹುದ್ದೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು ಒಂದು ವರ್ಷದ ಅವಧಿಗೆ ನಿಯಮಿತವಾಗಿರುತ್ತದೆ. ನಂತರ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಅವಶ್ಯಕತೆಯಿದ್ದಲ್ಲಿ 5 % ಹೆಚ್ಚಳ ವೇತನದೊಂದಿಗೆ ಮುಂದುವರೆಸಲಾಗುವುದು.
2. ವಯೋಮಿತಿ: i) ಕಾನೂನು ಸಲಹೆಗಾರರು (Legal Advisor) ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 65 ವರ್ಷಗಳು ಮೀರಿರಬಾರದು
   ii) ಕಾನೂನು ಸಮಾಲೋಚಕರು (Legal consultant) ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 50 ವರ್ಷಗಳು ಮೀರಿರಬಾರದು
3. ಸದರಿಯವರು ಕಛೇರಿ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಿರಬೇಕು ಹಾಗೂ ಅಧಿಕಾರಿಗಳೊಂದಿಗೆ ಸಮಾಲೋಚನೆಗೆ ಹಾಜರಿರತಕ್ಕದ್ದು
4. ಕಾಲಕಾಲಕ್ಕೆ ಅವರಿಗೆ ವಹಿಸಲಾಗುವ ಕಾನೂನು ಪ್ರಕರಣ ಅಥವಾ ಕಾನೂನಿಗೆ ಸಂಬಂಧಿಸಿದ ಇತರೆ ತೊಡಕುಗಳ ನಿವಾರಣೆಯಲ್ಲಿ ಕಾನೂನು ಸಲಹೆ ನೀಡತಕ್ಕದ್ದು.
5. ಅವರಿಗೆ ವಹಿಸಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖೆಯನ್ನು ಪ್ರತಿನಿಧಿಸುವ ಸರ್ಕಾರಿ ವಕೀಲರುಗಳಿಗೆ ಮಾರ್ಗದರ್ಶನ / ಮೇಲ್ವಿಚಾರಣೆ ನಡೆಸಿ ವರದಿ ಸಲ್ಲಿಸತಕ್ಕದ್ದು.
6. ಸದರಿಯವರು ತಮಗೆ ನೀಡಲಾದ ಸಿಬ್ಬಂದಿ ವರ್ಗದವರ ಸಹಯೋಗದೊಂದಿಗೆ ಕಾನೂನು ಕೋಶದ ಸುಗಮ ನಿರ್ವಹಣೆಗಾಗಿ ಸಂಪೂರ್ಣ ಜವಾಬ್ದಾರಿ ಹೊರತಕ್ಕದ್ದು.

7. ಇಲಾಖೆಯ ವಿರುದ್ಧ ದಾಖಲಾಗಿರುವ ಎಲ್ಲಾ ವಿಧವಾದ ಪ್ರಕರಣಗಳಿಗೆ (ರಿಟ್ ಅರ್ಜಿ, ಕೆ.ಎ.ಟಿ ಅರ್ಜಿ, ನಿಂದನಾ ಅರ್ಜಿ, ಮೇಲ್ಮನವಿ, ಸಿವಿಲ್ ಪ್ರಕರಣ ಕ್ರಿಮಿನಲ್ ಪ್ರಕರಣ ಇತ್ಯಾದಿ) ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯಗಳಲ್ಲಿ ಕಂಡಿಕೆವಾರು ಉತ್ತರಗಳನ್ನು ಆಕ್ಷೇಪಣಾ ಹೇಳಿಕೆಗಳು, ತಕರಾರು ಅರ್ಜಿಗಳನ್ನು ಸಲ್ಲಿಸುವುದು ಹಾಗೂ ಇಲಾಖೆಯ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುವುದು ಮತ್ತು ಸರ್ಕಾರಿ ವಕೀಲರ ಸಮನ್ವಯದೊಂದಿಗೆ ಸಂಪೂರ್ಣವಾಗಿ ಕಾರ್ಯ ನಿರ್ವಹಿಸುವುದು.
8. ನ್ಯಾಯಾಲಯ ಪ್ರಕರಣಗಳನ್ನು ಕಾಲಕಾಲಕ್ಕೆ ಹಿಂಬಾಲಿಸಿ, ನ್ಯಾಯ ನಿಂದನೆಗೆ ಒಳಗಾಗದಂತೆ ತ್ವರಿತವಾಗಿ ಇತ್ಯರ್ಥಪಡಿಸುವುದು ಹಾಗೂ ಪ್ರಕರಣಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸಲು ಕ್ರಮ ವಹಿಸುವುದು.
9. ನ್ಯಾಯಾಲಯ ಪ್ರಕರಣ, ಇಲಾಖೆಯ ಕಡತಗಳಲ್ಲಿ ಕಾನೂನು ಅಭಿಪ್ರಾಯ ನೀಡುವುದು.
10. ಇಲಾಖೆಗೆ ಸಂಬಂಧಪಟ್ಟ ನ್ಯಾಯಾಲಯ ಪ್ರಕರಣಗಳ ಪಟ್ಟಿಯನ್ನು ತಯಾರಿಸಿ ಪ್ರತಿ ಪ್ರಕರಣದಲ್ಲಿರುವ ಪ್ರಾರ್ಥನೆ, ಪ್ರಕರಣ ಹಂತವನ್ನು ಮೇಲಾಧಿಕಾರಿಗಳ ಗಮನಕ್ಕೆ ತರುವುದು.
11. ಸರ್ಕಾರಿ ಇಲಾಖೆಗಳಲ್ಲಿ ಈಗಾಗಲೇ ಈ ವಿಷಯಗಳ ಬಗ್ಗೆ ಕರ್ತವ್ಯ ನಿರ್ವಹಿಸಿ ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು.
12. ಅಧೀನ ಕಛೇರಿಗಳಲ್ಲಿನ ನ್ಯಾಯಾಲಯ ಪ್ರಕರಣಗಳಲ್ಲಿ ಕಾನೂನು ಅಭಿಪ್ರಾಯ ನೀಡುವುದು.
13. ಕಾನೂನು ಸಮಾಲೋಚಕರು, ಕಾನೂನು ಸಲಹೆಗಾರರ ಮಾರ್ಗದರ್ಶನ ಹಾಗೂ ಅಧೀನದಲ್ಲಿ ಕಾರ್ಯ ನಿರ್ವಹಿಸುವುದು.
14. ಬೇರೆ ಯಾವುದೇ ಕಾನೂನು ವಿಷಯಕ್ಕೆ ಸಂಬಂಧಿಸಿದಂತೆ ನಿಗದಿತ ಅವಧಿಯಲ್ಲಿ ಅಭಿಪ್ರಾಯ ನೀಡುವುದು.
15. ಇಲಾಖೆಯ ವಿರುದ್ಧದ ಅಥವಾ ಇಲಾಖೆಯ ಹಿತಾಸಕ್ತಿಗೆ ಧಕ್ಕೆ ಬರುವಂತಹ ಪ್ರಕರಣದ ಯಾವುದೇ ಖಾಸಗಿ ವ್ಯಕ್ತಿಗಳಿಗೆ ಮಾರ್ಗದರ್ಶನ ನೀಡಬಾರದು. (They Should work with highest integrity)
16. ವ್ಯಾಜ್ಯ ನಿರ್ವಾಹಣಾ ಅಧಿಕಾರಿಗಳು ಹಾಗೂ ಶಪಥ ಮಾಡುವ ಅಧಿಕಾರಿಗಳನ್ನು ನೇಮಿಸುವ ಸರ್ಕಾರದ ಆದೇಶವನ್ನು ಹೊರಡಿಸಲು ಸಹಕರಿಸುವುದು.
17. ಆಯ್ಕೆ ಅಧಿಸೂಚನೆ ಹೊರಡಿಸಲ್ಪಟ್ಟು, ನೇಮಕಾತಿ ಆದೇಶ ತಲುಪಿದ 7 ದಿನಗಳೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು.
18. ಇಲಾಖೆಯು, ಸದರಿಯವರ ಸೇವಾವಧಿ ಮುಗಿಯುವ ಒಳಗೆ (Contract Period) ಒಂದು ತಿಂಗಳ ನೋಟಿಸ್ ಅಥವಾ ಒಂದು ತಿಂಗಳ ವೇತನ ನೀಡಿ ಸೇವಾ ಅವಧಿಯನ್ನು ಮುಕ್ತಾಯಗೊಳಿಸಬಹುದು. ಅದೇ ರೀತಿ ಸದರಿಯವರು 1 ತಿಂಗಳ ನೋಟಿಸ್ ಅಥವಾ 1 ತಿಂಗಳ ವೇತನ ನೀಡಿ ಅವಧಿಯನ್ನು ಮುಕ್ತಾಯಗೊಳಿಸಬಹುದು.
19. ವಿದ್ಯಾರ್ಹತೆ ಅನುಭವ ಮತ್ತು ವಯಸ್ಸಿನ ದೃಢೀಕರಣದೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ, ನಿರ್ದೇಶಕರು, ಆರೋಗ್ಯ ಮತ್ತು ಕು.ಕ ಸೇವೆಗಳು, ಆರೋಗ್ಯಸೌಧ, ಮಾಗಡಿರಸ್ತೆ, ಬೆಂಗಳೂರು ಇವರಿಗೆ ದಿ:17/01/2024 ಸಾಯಂಕಾಲ ----------- 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು, ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. (ಅರ್ಜಿಯ ನಮೂನೆಯ hfwcom.karnataka.gov.in ಜಾಲತಾಣದಲ್ಲಿ ಲಭ್ಯವಿರುತ್ತದೆ.
20. ನಿರ್ದೇಶಕರು, ಈ ಪ್ರಕಟಣೆಯನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣವನ್ನು ನೀಡದೆ ನೇಮಕಾತಿ ಪ್ರಕಟಣೆಯನ್ನು ರದ್ದುಗೊಳಿಸಬಹುದಾದ ಅಧಿಕಾರ ಹೊಂದಿರುತ್ತಾರೆ.

WEBSITE : https://hfwcom.karnataka.gov.in

ಆಯುಕ್ತರು,
ಆರೋಗ್ಯ ಮತ್ತು ಕು.ಕ ಸೇವೆಗಳು,
ಬೆಂಗಳೂರು.

23/11